3. ರೂ. 43,14,000-(

4. ಬಂದಿದೆ.

5. ಕಾಂಟೆಸ್ಸಾ ಕ್ಲಾಸಿಕ್ ಕಾರುಗಳು ಪ್ರತಿ ಲೀಟರ್ ಪೆಟ್ರೋಲ್‌ಗೆ ಅಂಬಾಸಿಡರ್ ಕಾರಿಗಿಂತ ಉತ್ತಮ ಮೈಲೇಜ್ ನೀಡುತ್ತಿದ್ದು, ದೂರದ ಪ್ರವಾಸಕ್ಕೆ ಅನುಕೂಲವೆಂದು ಕಂಡುಬಂದಿರುವುದರಿಂದ, ಈ ವಾಹನವನ್ನು ಖರೀದಿಸಲಾಗಿದೆ. ಆದಕಾರಣ, ಈಗಿರುವ ಕಾರುಗಳನ್ನು ವಿಲೇವಾರಿ ಮಾಡುವ ಅವಶ್ಯಕತೆ ಇಲ್ಲವೆಂದು ಸರ್ಕಾರವು ಪರಿಗಣಿಸಿದೆ.

ಬಸವಕಲ್ಯಾಣದಲ್ಲಿ ಟ್ರಾಫಿಕ್ ಪೋಲೀಸ್ ಠಾಣೆ ಪ್ರಾರಂಭ

241 (481) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ):-

ರಾಜ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಸವಕಲ್ಯಾಣದಲ್ಲಿ ಜನಸಂಚಾರ ಅಧಿಕವಿದ್ದು ಇದರಿಂದ ಸಂಚಾರಕ್ಕೆ ಅಡ್ಡಿಯಾಗುತ್ತಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಇಲ್ಲಿ ಸಂಚಾರಿ ಪೋಲೀಸ್ ಠಾಣೆ ಆರಂಭಿಸುವುದಾಗಿ ಹಿಂದಿನ ಸರ್ಕಾರದ ಗೃಹಮಂತ್ರಿಗಳು ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ಆಶ್ವಾಸನೆ ನೀಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಹೊಸದಾಗಿ ಸಂಚಾರಿ ಪೋಲೀಸ್ ಠಾಣೆಯನ್ನು ಆರಂಭಿಸಲಾಗುವುದೇ;

ಈ) ಹಾಗಿದ್ದಲ್ಲಿ ಎಂದಿನಿಂದ ಆರಂಭಿಸಲಾಗುವುದು;

ಉ) ಇಲ್ಲದಿದ್ದರೆ ಅದಕ್ಕೆ ಕಾರಣವೇನು ?

ಶ್ರೀ ರಾಮನಾಥ ರೈ (ರಾಜ್ಯ ಗೃಹಮಂತ್ರಿಗಳು):-

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಶಪಡಿಸಿಕೊಂಡ ಜಮೀನುಗಳ ವಿಸ್ತೀರ್ಣ

246 (653) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1989ರಿಂದ ಈವರೆಗೆ ಬೆಂಗಳೂರು ಪ್ರಾಧಿಕಾರದಲ್ಲಿ ನಿವೇಶನಗಳನ್ನು ಕೊಡುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನು ಎಷ್ಟು;

ಆ) ಇದೇ ಅವಧಿಯಲ್ಲಿ ನಿವೇಶನಗಳಿಗಾಗಿ ಬಂದಿರುವ ಅರ್ಜಿಗಳು ಎಷ್ಟು ಹಾಗೂ ಹಂಚಿರುವ ನಿವೇಶನಗಳು ಎಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) 321 ಎಕರೆ 13 ಗುಂಟೆ

ಆ) ಈ ಅವಧಿಯಲ್ಲಿ ಯಾವ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ; ಮತ್ತು ಯಾವ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.

ಬೆಂಗಳೂರು ನಗರ ಜಿಲ್ಲೆಯ ಕಾರ್ಡುದಾರರಿಗೆ ವಿತರಣೆ ಮಾಡುತ್ತಿರುವ ಸೀಮೆಎಣ್ಣೆ ಮತ್ತು ಸಕ್ಕರೆಯ ಪ್ರಮಾಣ

199 (1052) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):-

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಜಿಲ್ಲೆಯ ಪ್ರತಿ ಕಾರ್ಡುದಾರರಿಗೆ ಪ್ರತಿ ತಿಂಗಳು ವಿತರಣೆ ಮಾಡುತ್ತಿರುವ ಸೀಮೆಎಣ್ಣೆ ಮತ್ತು ಸಕ್ಕರೆಯ ಪ್ರಮಾಣವೆಷ್ಟು;

ಆ) ಗ್ರಾಮಾಂತರ ಪ್ರದೇಶದಲ್ಲಿ ಪ್ರತಿ ಕಾರ್ಡುದಾರರಿಗೆ ಪ್ರತಿ ತಿಂಗಳು ವಿತರಣೆ ಮಾಡುತ್ತಿರುವ ಸೀಮೆಎಣ್ಣೆ ಮತ್ತು ಸಕ್ಕರೆಯ ಪ್ರಮಾಣವೆಷ್ಟು;

ಇ) ವಿತರಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ತಾರತಮ್ಯಕ್ಕೆ ಕಾರಣಗಳೇನು;

ಈ) ಹಾಗಿದ್ದಲ್ಲಿ, ವ್ಯತ್ಯಾಸವನ್ನು ಬಗೆಹರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ಈ ಕೆಳಕಂಡಂತೆ ವಿತರಿಸಲಾಗುತ್ತಿದೆ:–

ಸಕ್ಕರೆ –

ಪಟ್ಟಣ ಪ್ರದೇಶ: ಪ್ರತಿ ಕಾರ್ಡಿಗೆ ತಿಂಗಳಿಗೆ 3 ಕೆ.ಜಿ.
ಗ್ರಾಮಾಂತರ: ಪ್ರತಿ ಕಾರ್ಡಿಗೆ ತಿಂಗಳಿಗೆ 1 1/2 ಕೆ.ಜಿ.

ಸೀಮೆಎಣ್ಣೆ –

ಪಟ್ಟಣ ಪ್ರದೇಶ: ಪ್ರತಿ ಕಾರ್ಡಿಗೆ ತಿಂಗಳಿಗೆ 6 ಲೀಟರ್

ಆ) ಸಕ್ಕರೆ – ಪ್ರತಿ ಕಾರ್ಡಿಗೆ 1 1/2 ಕೆ.ಜಿ.
ಸೀಮೆಎಣ್ಣೆ – ಪ್ರತಿ – ಕಾರ್ಡಿಗೆ 4 ರಿಂದ 5 ಲೀಟರ್

ರಾಜ್ಯಕ್ಕೆ ತಿಂಗಳಿಗೆ 67,000 ಕಿ.ಲೀ. ಸೀಮೆಎಣ್ಣೆ ಮತ್ತು 29,050 ಮಿ.ಟನ್. ಸಕ್ಕರೆ ಬೇಡಿಕೆ ಇದ್ದು ಕೇಂದ್ರ ಸರ್ಕಾರವು ತಿಂಗಳಿಗೆ 47,513 ಕಿ.ಲೀ. ಸೀಮೆಎಣ್ಣೆ ಮತ್ತು 16,667.4 ಮೆ.ಟನ್ ಸಕ್ಕರೆಯನ್ನು ಬಿಡುಗಡೆ ಮಾಡುತ್ತಿರುತ್ತಾರೆ. ಹಳ್ಳಿಗಳಲ್ಲಿನ ಪಡಿತರ ಚೀಟಿದಾರರು ತಾವೇ ಕೆಲವು ಪಡಿತರ ಧಾನ್ಯಗಳನ್ನು ಬೆಳೆದುಕೊಳ್ಳುತ್ತಾರೆ. ಸೀಮೆಎಣ್ಣೆ ಬದಲಾಗಿ ಉರುವಲು ಕಟ್ಟಿಗೆ ಉಪಯೋಗಿಸುತ್ತಾರೆ